ವಿಷಯ :- ಹುಬ್ಬಳ್ಳಿ - ಧಾರವಾಡದಲ್ಲಿ ಏಡ್ಸ್ ರೋಗ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1001 (1810)

ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) :- ಮಾನ್ಯ ಆರೋಗ್ಯ ಮತ್ತು ಕುಟುಂಬಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಬ್ಬಳ್ಳಿ-ಧಾರವಾಡ ಮಹಾ ನಗರದಲ್ಲಿ ಇತ್ತೀಚಿಗೆ ಏಡ್ಸ್ ರೋಗಗಳು ಪತ್ತೆ ಆಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ, ಹಾಗಿದ್ದಲ್ಲಿ ಎಷ್ಟು ರೋಗ ಗಳನ್ನು ಪತ್ತೆ ಹಚ್ಚಲಾಗಿದೆ;

ಆ) ಈ ರೋಗ ಹರಡುವುದನ್ನು ತಡೆಗಟ್ಟಲು ಸರ್ಕಾರದವರು ಕೈಗೊಂಡ ಕ್ರಮಗಳೇನು;

ಡಾ : ಹೆಚ್. ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :-

ಅ) ಬಂದಿದೆ. ಈವರೆವಿಗೂ 2 (ಎರಡು) ಏಡ್ಸ್ ರೋಗ ಪ್ರಕರಣಗಳು ವರದಿಯಾಗಿದೆ ಹಾಗೂ ಧಾರವಾಡ ಜಿಲ್ಲಾದ್ಯಂತ 1996 ರ ಜೂನ್ ಅಂತ್ಯದವರೆವಿಗೆ 74 ಮಂದಿಗೆ ಏಡ್ಸ್ ಸೋಂಕು ತಗುಲಿರುವುದು ಪತ್ತೆಯಾಗಿದೆ.

ಆ) ಏಡ್ಸ್ ರೋಗ ಹರಡುವುದನ್ನು ತಡೆಗಟ್ಟಲು ಭಾರತ ಸರ್ಕಾರದ ರಾಷ್ಟ್ರೀಯ ಏಡ್ಸ್ ನಿಯಂತ್ರಣ ಸಂಸ್ಥೆಯ ಮಾರ್ಗಸೂಚಿಯಂತೆ, ರಾಷ್ಟ್ರೀಯ ಏಡ್ಸ್ ನಿಯಂತ್ರಣ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಏಡ್ಸ್ ರೋಗ ನಿಯಂತ್ರಣಕ್ಕಾಗಿ ಮುನ್ನೆಚ್ಚರಿಕೆ ಕೈಗೊಳ್ಳಲು 3 (ಮೂರು) ಏಡ್ಸ್ ಸಮೀಕ್ಷಾ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಈ ಕೇಂದ್ರಗಳಲ್ಲಿ ಹೆಚ್.ಐ.ವಿ. ಸೋಂಕಿನ ಪತ್ತೆಗೆ ಪರೀಕ್ಷೆ ಹಾಗೂ ಸೋಂಕಿನ ಪರಿಮಾಣವನ್ನು ತಿಳಿಯಲು ಸಮೀಕ್ಷೆಗಳನ್ನು ನಡೆಸಲಾಗುತ್ತಿದೆ. ರಕ್ತ ಸುರಕ್ಷತೆಗಾಗಿ 10 (ಹತ್ತು) ವಲಯ ರಕ್ತ ತಪಾಸಣಾ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಎಲ್ಲ ರಕ್ತ ನಿಧಿ ಕೇಂದ್ರಗಳನ್ನು ಏಡ್ಸ್ ಸೋಂಕು ಪರೀಕ್ಷೆಗಾಗಿ ವಲಯ ರಕ್ತ ತಪಾಸಣಾ ಕೇಂದ್ರಕ್ಕೆ ಜೋಡಣೆ ಮಾಡಲಾಗಿದೆ. ರಾಜ್ಯದಲ್ಲಿರುವ ಒಟ್ಟು 42 ರಕ್ತನಿಧಿ ಕೇಂದ್ರಗಳನ್ನು ಹಂತ ಹಂತವಾಗಿ ಆಧುನೀಕರಿಸಲಾಗುತ್ತಿದೆ. ಜಿಲ್ಲಾ ಮಟ್ಟದ ರಕ್ತ ನಿಧಿ ಕೇಂದ್ರಗಳಿಗೆ ತುರ್ತು ಪರಿಸ್ಥಿತಿ ಯಲ್ಲಿ ರಕ್ತ ಸುರಕ್ಷತೆಗಾಗಿ ಪರೀಕ್ಷೆಗೆ ಹೆಚ್.ಐ.ವಿ. ರಾಪಿಡ್ ಟೆಸ್ಟ್ ಕಿಟ್‌ಗಳನ್ನು ಒದಗಿಸಲಾಗಿದೆ. ರಾಜ್ಯದಲ್ಲಿ ಹಿರಿಯ ಆಸ್ಪತ್ರೆಗಳ, ಜಿಲ್ಲಾ ಆಸ್ಪತ್ರೆಗಳ ಹಾಗೂ ತಾಲ್ಲೂಕು ಮಟ್ಟದ ಆಸ್ಪತ್ರೆಗಳ ಒಟ್ಟು 24 ಲೈಂಗಿಕ ಚಿಕಿತ್ಸಾಲಯಗಳನ್ನು ಬಲವರ್ಧನೆ ಮಾಡಲಾಗಿದೆ. ಮತ್ತು ಚಿಕಿತ್ಸೆಯ ಜೊತೆಗೆ ಸುರಕ್ಷಿತ ಲೈಂಗಿಕತೆ ಬಗ್ಗೆ ತಿಳಿವಳಿಕೆ ನೀಡಲಾಗುತ್ತಿದೆ.

ಇ) ಏಡ್ಸ್ ನಿಯಂತ್ರಣದ ಬಗ್ಗೆ ಮಾಹಿತಿ ನೀಡಲು ಸಮೂಹ ಮಾಧ್ಯಮ ಸಂಪರ್ಕ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗಿದೆ. ಎಲ್ಲಾ ಆಸ್ಪತ್ರೆಗಳಲ್ಲಿ ಸಮರ್ಪಕವಾಗಿ

ಸಂಸ್ಕರಣೆ ಮಾಡಿ ಸೂಜಿ, ಸಿರಿಂಜ್‌ಗಳನ್ನು ಮತ್ತು ಉಪಕರಣಗಳನ್ನು ಬಳಸಲು ಸೂಚಿಸಲಾಗಿದೆ.

ವಿಷಯ :- ಧಾರವಾಡ ಜಿಲ್ಲೆಯಲ್ಲಿ ಸರ್ಕಾರಿ ಕಾಲೇಜುಗಳ ಸಂಖ್ಯೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1003 (1811)

ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) :- ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಧಾರವಾಡ ಜಿಲ್ಲೆಯಲ್ಲಿರುವ ಸರ್ಕಾರಿ ಪದವಿ ಕಾಲೇಜುಗಳ ಸಂಖ್ಯೆ ಎಷ್ಟು? ಅವುಗಳು ಯಾವುವು? (ತಾಲ್ಲೂಕುವಾರು ವಿವರ ನೀಡುವುದು)

ಆ) ಹುಬ್ಬಳ್ಳಿ-ಧಾರವಾಡ ಮಹಾನಗರ ವ್ಯಾಪ್ತಿಯಲ್ಲಿ ಯಾವುದೇ ಸರ್ಕಾರಿ ಪದವಿ ಕಾಲೇಜುಗಳು ಇಲ್ಲದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಬಂದಿದ್ದಲ್ಲಿ, ಸರ್ಕಾರಿ ಪದವಿ ಕಾಲೇಜುಗಳನ್ನು ತೆರೆಯಲು ಸರ್ಕಾರದವರು ಕೈಗೊಂಡ ಕ್ರಮಗಳೇನು?

ಶ್ರೀ ಬಿ. ಸೋಮಶೇಖರ್ (ಉನ್ನತ ಶಿಕ್ಷಣ ಸಚಿವರು) :-

ಅ) ಧಾರವಾಡ ಜಿಲ್ಲೆಯಲ್ಲಿ ಒಟ್ಟು 10 ಸರ್ಕಾರಿ ಪದವಿ ಕಾಲೇಜುಗಳಿವೆ. ಅವುಗಳು ಯಾವುವೆಂದರೆ :-

1) ಶ್ರೀ ಸಿದ್ದೇಶ್ವರ ಸರ್ಕಾರಿ ಮಹಾವಿದ್ಯಾಲಯ, ನರಗುಂದ (ಧಾರವಾಡ ತಾಲ್ಲೂಕು).
2) ಸರ್ಕಾರಿ ಕಾಲೇಜು ಹಿರೇಕೆರೂರು (ಧಾರವಾಡ ತಾ:)
3) ಸರ್ಕಾರಿ ಕಾಲೇಜು, ಸವಣೂರು (ಧಾರವಾಡ ತಾ:)
4) ಸರ್ಕಾರಿ ಕಾಲೇಜು, ಗಜೇಂದ್ರಗಡ್ (ರೋಣ ತಾ:)
5) ಸರ್ಕಾರಿ ಕಾಲೇಜು, ಅಕ್ಕಿಆಲೂರು (ಹಾನಗಲ್ ತಾ:)
6) ಸರ್ಕಾರಿ ಕಾಲೇಜು, ಶಿರಹಟ್ಟಿ (ಶಿರಹಟ್ಟಿ ತಾ:)
7) ಸರ್ಕಾರಿ ಕಾಲೇಜು, ಅಳ್ನಾವರ (ಧಾರವಾಡ ತಾ:)
8) ಸರ್ಕಾರಿ ಕಾಲೇಜು, ಗುಡಿಗೇರಿ (ಕುಂದಗೋಳ ತಾ:)
9) ಸರ್ಕಾರಿ ಕಾಲೇಜು, ಬಂಕಾಪುರ (ಶಿಗ್ಗಾಂವ ತಾ:)
10) ಸರ್ಕಾರಿ ಕಾಲೇಜು, ರೋಣ (ರೋಣ ತಾ:)

ಆ) ಬಂದಿದೆ.